**ಶಿಶು ವಿಕಾಸಕ್ಕಾಗಿ  ಸಮಗ್ರ ಯೋಜನೆ**

ಯಲಹಂಕ: ಕೇಂದ್ರ ಸರಕಾರದ ಮಹಿಳಾ ಮತ್ತು ಶಿಶು ಅಭಿವೃದ್ಧಿ ಖಾತೆಯ ಸಹಾಯಕಸಚಿವೆ ಶ್ರೀಮತಿ ಬಸವರಾಜೇಶ್ವರಿಯವರು ರಾಷ್ಟ್ರೀಯ ಸಾರ್ವಜನಿಕ ಸಹಕಾರ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ(ನಿಬ್ಸೀಡ)ಯ ನೂತನ ಆಡಳಿತ ಕಟ್ಟಡದ ಶಿಲಾನ್ಯಾಸವನ್ನು ಯಲಹಂಕದಲ್ಲಿ ಸೋಮವಾರ ನೆರವೇರಿಸಿದರು.

ನಿಬ್ಸೀಡನ ಅಧ್ಯಕ್ಷರೂ ಆದ ಶ್ರೀಮತಿ ಬಸವರಾಜೇಶ್ವರಿಯವರು ಮಕ್ಕಳ ಅಭಿವೃದ್ಧಿಗಾಗಿ ೧೮ ನೂತನ ಸಮಗ್ರ ಶಿಶುವಿಕಾಸ ಯೋಜನೆಗಳನ್ನು ಪ್ರಾರಂಭಿಸುವುದಾಗಿ ಹೇಳಿಕೆ ನೀಡಿದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅರ್ನಾಟಕ ಸಾಮಜಿಕ ಅಭ್ಯುದಯ ಮತ್ತು ಕಂದಾಯ ಸಚಿವ ಧರಂಸಿಂಗ್ ಮಾತ್ನಾಡಿ ಕರ್ನಾಟಕ,ತಮಿಳನಾಡು , ಪುದುಚೇರಿ,ಗೋವಾಗಳಲ್ಲಿ ಶಿಶು ಅಭಿವೃದ್ಧಿಯ ತರಬೇತಿ ಮತ್ತು ಸಂಶೋಧನಾ ಕೇಂದ್ರಗಳಿಗೆ ಅವಕಾಶ ನೀಡುವುದಾಗಿ ಹೇಳಿದರು. ನಿಬ್ಸೀಡನ ನಿರ್ದೇಶಕ ಡಿ. ಪಿ. ಸೇಠಿಯವರು ಕಾರ್ಯಕ್ರಮದಲ್ಲಿ ಮಾತನಾಡಿದರು. ಯಲಹಂಕದ ಶಾಸಕರಾದ ಪ್ರಸನ್ನಕುಮರ್ ಉಪಸ್ಥಿತರಿದ್ದರು.

Feb 1st 1994    Hosa Diganta    Shisu Vikaasakkaagi Samagra Yojane.